ಪಿ.ಡಬ್ಲ್ಯೂಃ 1

ದಿನಾಂಕ 10-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಎದುರುಗಾರರ ಪರ ಶ್ರೀ ಆರ್.ಎಸ್.ಹೆಚ್ ವಕೀಲರಿಂದಃ

1. ಮುಖ್ಯ ಅರ್ಜಿ ಮತ್ತು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಸಂಗತಿಗಳೆಲ್ಲವೂ ಸತ್ಯದಿಂದ ಕೂಡಿರುತ್ತವೆ. ಮದುವೆಯನ್ನು ನನ್ನ ಪೋಷಕರು ಸಾಕಷ್ಟು ಖರ್ಚು ಮಾಡಿ ಎದುರುಗಾರನೊಂದಿಗೆ ನೆರವೇರಿಸಿದ್ದರು ಎಂದು ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ. ದಿಃ 12-12-2021 ರಂದು ಎದುರುಗಾರನೊಂದಿಗೆ ನನ್ನ ಮದುವೆಯು ಹುಬ್ಬಳ್ಳಿಯ ನೇಕಾರ ನಗರದಲ್ಲಿ ಇರುವ ವೀರ ಕಂಠೇಶ್ವರ ದೇವಸ್ಥಾನದಲ್ಲಿ ಆಗಿತ್ತು. ನನ್ನ ಮತ್ತು ಎದುರುಗಾರನ ಹಿರಿಯರ ಒಪ್ಪಿಗೆಯ ಮೇರೆಗೆ ನಮ್ಮ ಮದುವೆ ಆಗಿತ್ತು ಎಂದರೆ ಸರಿ. ನನ್ನ ಮದುವೆಯ ಪೂರ್ವದಲ್ಲಿ ಎದುರುಗಾರನ ಮನೆಯಲ್ಲಿ ಎಷ್ಟು ಸದಸ್ಯರು ಇದ್ದಾರೆ ಎಂದು ಗೊತ್ತಿತ್ತು ಎಂದರೆ ಸರಿ. ಎದುರುಗಾರನ ಕುಟುಂಬದಲ್ಲಿ ಆತನ ಒಬ್ಬ ಸಹೋದರ ಮತ್ತು ತಂದೆ, ತಾಯಿ ಒಟ್ಟು 4 ಜನ ಇದ್ದರು. ಎದುರುಗಾರನ ಸಹೋದರನ ಹೆಸರು ಸೌರು. ಆತ ಮರಣ ಹೊಂದಿರುತ್ತಾನೆ.

2. ಎದುರುಗಾರನು ಸ್ವಂತ ಮನೆಯಲ್ಲಿ ವಾಸವಿದ್ದಾನೆ ಮತ್ತು ಮನೆಯನ್ನು ಬಾಡಿಗೆಗೆ ನೀಡಲಾಗಿದೆ ಎಂದು ನಾನು ಮದುವೆ ಆಗುವ ಸಮಯದಲ್ಲಿ ಗೊತ್ತಿತ್ತು. ನಾನು ಮದುವೆಯ ನಂತರ ಎದುರುಗಾರನೊಂದಿಗೆ ಒಂದು ವರ್ಷದ ವರೆಗೆ ಸಾಂಸಾರಿಕ ಜೀವನ ಮಾಡಿರುತ್ತೇನೆ. ದಿಃ 07-11-2022 ರಂದು ನಾನು ಎದುರುಗಾರನೊಂದಿಗೆ ಜೊತೆಗಿದ್ದ ಕಡೆಯ ದಿನವಾಗಿತ್ತು. ನಾನು ಮದುವೆಯಾದ 6 ತಿಂಗಳವರೆಗೆ ಎದುರುಗಾರನು ನನ್ನನ್ನು ಚೆನ್ನಾಗಿ ನೋಡಿಕೊಂಡಿದ್ದು, ನಂತರದಲ್ಲಿ ನನಗೆ ಹಿಂಸೆಯನ್ನು ನೀಡುತ್ತಿದ್ದರು. ಯಾವ ಯಾವ ದಿನಾಂಕಗಳಲ್ಲಿ ನನಗೆ ಎದುರುಗಾರರು ಹಿಂಸೆ ನೀಡಿರುತ್ತಾರೆಂದು ಗೊತ್ತಿಲ್ಲ.



3. ಒಬ್ಬ ಮಹಿಳೆಯು ಗರ್ಭಿಣಿ ಆದಾಗ ಹೆಚ್ಚಿಗೆ ಓಡಾಡಬಾರದು ಎಂದರೆ ಸರಿ. ಎದುರುಗಾರನು ಎಂದಿಗೂ ನನಗೆ ಯಾವುದೇ ರೀತಿಯ ಹಿಂಸೆ ನೀಡಿಲ್ಲ ಎಂದರೆ ಸರಿಯಲ್ಲ. ಹಿಂಸೆಯ ಬಗ್ಗೆ ಮುಖ್ಯ ಅರ್ಜಿಯಲ್ಲಿ ನಮೂದಿಸಿರುವ ಸಂಗತಿಗಳೆಲ್ಲವೂ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ಎದುರುಗಾರನ ತಂದೆಯು ಅನಾರೋಗ್ಯದಿಂದ ಬಳಲುತ್ತಿದ್ದಾರೆ ಎಂದರೆ ಸಾಕ್ಷಿಯು ಆತನ ಮನೆಯಿಂದ ಬರುವಾಗ ಅವರು ಚೆನ್ನಾಗಿಯೇ ಇದ್ದು, ಈಗ ಅವರಿಗೆ ಏನು ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

4. ಎದುರುಗಾರನು ತನ್ನ ತಂದೆಯ ಚಿಕಿತ್ಸೆಗಾಗಿ ಪ್ರತೀ ತಿಂಗಳು ರೂ.4000/- ವೈದ್ಯಕೀಯ ಖರ್ಚನ್ನು ಭರಿಸುತ್ತಿದ್ದಾನೆ ಎಂದರೆ ಗೊತ್ತಿಲ್ಲ. ಆತನಿಗೆ ಬರುವ ಸ್ವಲ್ಪ ಸಂಬಳದಲ್ಲಿ ತನ್ನ ತಂದೆ ಮತ್ತು ತಾಯಿಯ ಆಗು ಹೋಗುಗಳನ್ನು ನಿಭಾಯಿಸುತ್ತಿದ್ದಾನೆ ಎಂದರೆ ಸರಿಯಲ್ಲ. ಎದುರುಗಾರನು ಹುಬ್ಬಳ್ಳಿಯ ಕೆ ಎಂ ಸಿ ಆಸ್ಪತ್ರೆಯಲ್ಲಿ ರಕ್ತ ಪರೀಕ್ಷಕರಾಗಿ ಕೆಲಸ ಮಾಡುತ್ತಿದ್ದಾರೆ. ಆತನು ಸದರಿ ಆಸ್ಪತ್ರೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಸಹಾಯಕನಾಗಿ ಕೆಲಸ ಮಾಡುತ್ತಿದ್ದು, ರಕ್ತ ಪರೀಕ್ಷಕನಾಗಿ ಕೆಲಸ ಮಾಡುತ್ತಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸಾಕ್ಷಿಯು, ಆತನೇ ಸದರಿ ಹುದ್ದೆಯಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ. ಆತನು ಗುತ್ತಿಗೆ ಆಧಾರದಲ್ಲಿ

ಕೆಲಸ ಮಾಡುತ್ತಿರುವುದರಿಂದ ಆತನನ್ನು ಯಾವ ಸಮಯದಲ್ಲಾದರೂ ತೆಗೆಯಬಹುದು ಎಂದರೆ ಸಾಕ್ಷಿಯು ಎದುರುಗಾರನು ತನ್ನನ್ನು ಕೆಲಸದಿಂದ ತೆಗೆಯಲು ಸಾಧ್ಯವಿಲ್ಲ ಎಂದು ನನಗೆ ತಿಳಿಸಿರುತ್ತಾನೆ ಎಂದು ನುಡಿಯುತ್ತಾರೆ.

5. ಆತನ ಅಲ್ಪ ಸಂಬಳದಲ್ಲಿ ಪ್ರತೀ ತಿಂಗಳು ನನಗೆ ಮಾಸಿಕ ರೂ.1,500/- ಮಧ್ಯಂತರ ಜೀವನಾಂಶ ನೀಡುತ್ತಿದ್ದಾನೆ ಎಂದರೆ ಸಾಕ್ಷಿಯು ಆಸ್ಪತ್ರೆಯಲ್ಲಿ ಜೀವನ ನೀಡುತ್ತಿದ್ದಾನೆ ಎಂದು ನುಡಿಯುತ್ತಾರೆ. ಆತನ ಅಲ್ಪ ಸಂಬಳದಲ್ಲಿ ಎಲ್ಲಾ ಖರ್ಚನ್ನು ಕಳೆದು



ರೂ.2,000/- ಮಾತ್ರ ಉಳಿಯುತ್ತದೆ ಎಂದರೆ ಗೊತ್ತಿಲ್ಲ. ಎದುರುಗಾರನಿಗೆ ಸಂಬಂಧಿಸಿದ ಸಂಬಳ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೇನೆ. ಎದುರುಗಾರನಿಗೆ ಮಾಸಿಕ ಎಷ್ಟು ಸಂಬಳ ಇದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು, ರೂ.35,000/- ತಿಂಗಳ ವೇತನ ಇದೆ ಎಂದು ಎದುರುಗಾರನು ನನಗೆ ತಿಳಿಸಿದ್ದನು ಎಂದು ನುಡಿಯುತ್ತಾರೆ. ಎದುರುಗಾರನಿಗೆ ಮಾಸಿಕ ರೂ.15,000/- ರಿಂದ ರೂ.20,000/- ಸಂಬಳ ಇರುವ ದಾಖಲೆ ಇದ್ದು, ಅದನ್ನು ಹಾಜರುಪಡಿಸಿರುತ್ತೇನೆ.

6. ಎದುರುಗಾರನಿಗೆ ಸದರಿ ಕೆಲಸದಿಂದ ಮಾಸಿಕ ರೂ.13,000/- ಸಂಬಳ ಇದೆ ಎಂದರೆ ಗೊತ್ತಿಲ್ಲ. ಆತನಿಗೆ ಮಾಸಿಕ ರೂ.13,000/- ಸಂಬಳ ಇದೆ ಎಂದು ಗೊತ್ತಿದ್ದರೂ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುಗಾರ ಮತ್ತು ಆತನ ಪೋಷಕರು ಬಾಡಿಗೆ ಮನೆಯಲ್ಲಿ ವಾಸವಿದ್ದಾರೆ ಎಂದರೆ ಸರಿಯಲ್ಲ. ಎದುರುಗಾರನಿಗೆ ಸ್ವಂತ ಮನೆ ಮತ್ತು ಇತರ ಮನೆಗಳನ್ನು ಬಾಡಿಗೆಗೆ ನೀಡಿರುವ ಬಗ್ಗೆ ನಾನು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಅವರಿಗೆ ಸ್ವಂತ ಮನೆಗಳು ಮತ್ತು ಬಾಡಿಗೆ ಬರುವ ಬಗ್ಗೆ ಯಾವುದೇ ದಾಖ್ಲೆಗಳನ್ನು ಹಾಜರುಪಡಿಸದೇ ಇದ್ದರೂ, ಮುಖ್ಯ ಅರ್ಜಿಯಲ್ಲಿ ಸ್ವಂತ ಮನೆ ಮತ್ತು ಬಾಡಿಗೆ ಹಣದ ಬಗ್ಗೆ ಸುಳ್ಳು ವಿವರಗಳನ್ನು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರನು ವೈದ್ಯಕೀಯ ಪ್ರತಿನಿಧಿಯಾಗಿಯೂ ಕೆಲಸ ಮಾಡುತ್ತಿದ್ದು, ಅದರಿಂದ ಮಾಸಿಕ ರೂ. 15,000/- ಸಂಬಳ ಬರುತ್ತದೆ ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ.

7. ತಂದೆ ತಾಯಿಗೆ ನನ್ನನ್ನು ಸೇರಿದಂತೆ 3 ಜನ ಮಕ್ಕಳು ಇರುತ್ತಾರೆ. ನನಗೆ ಒಬ್ಬ ಸಹೋದರಿ ಮತ್ತು ಒಬ್ಬ ಕಿರಿಯ ಸಹೋದರ ಇರುತ್ತಾರೆ. ನನ್ನ ಸಹೋದರಿ ಹೆಸರು ಮಂಗಳ ಮತ್ತು ಸಹೋದರನ ಹೆಸರು ಸುಧಾಕರ. ಆತನಿಗೆ ಮದುವೆ ಆಗಿರುವುದಿಲ್ಲ. ನನ್ನ ತಮ್ಮ ವಿದ್ಯುತ್ ಸಂಬಂಧಪಟ್ಟ ಕೆಲಸವನ್ನು ಮಾಡುತ್ತಾರೆ. ನನ್ನ ತಂದೆ ವ್ಯವಸಾಯ ಮಾಡುತ್ತಾರೆ. ನಮ್ಮ ತವರು ಕುಟುಂಬಕ್ಕೆ ಒಂದು ಎಕರೆ ಜಮೀನು ಇದೆ. ನಮ್ಮ ತವರು



ಕುಟುಂಬದವರು ಬಡ ಕುಟುಂಬದವರು ಇದ್ದಾರೆ ಎಂದು ಮುಖ್ಯ ಅರ್ಜಿಯಲ್ಲಿ ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಮಗುವಿಗೆ ಜನ್ಮ ನೀಡಿದ ನಂತರ ಎದುರುಗಾರನು ನನ್ನನ್ನು ನೋಡಲು ಬಂದಿರಲಿಲ್ಲ ಎಂದು ಸುಳ್ಳು ಬರೆಸಿದ್ದು, ಆತನು ತನ್ನ ತಂದೆ ತಾಯಿಯೊಂದಿಗೆ ನನ್ನನ್ನು ಮತ್ತು ಮಗುವನ್ನು ನೋಡಲು ಬಂದಿದ್ದನು ಎಂದರೆ ಸರಿಯಲ್ಲ. ಮುಖ್ಯ ಅರ್ಜಿಯಲ್ಲಿ ಸುಳ್ಳು ಸಂಗತಿಗಳನ್ನು ನಮೂದಿಸಿ ಈ ಸುಳ್ಳು ಜೀವನಾಂಶ ಪ್ರಕರಣ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

8. ನನ್ನನ್ನು ಎದುರುಗಾರನು ಮತ್ತು ಆತನ ಕುಟುಂಬದವರು ಪರಿ ಪರಿಯಾಗಿ ಹಲವಾರು ಬಾರಿ ಕೇಳಿಕೊಂಡರೂ ನಾನು ಎದುರುಗಾರನೊಂದಿಗೆ ಸಾಂಸಾರಿಕ ಜೀವನ ಮುಂದುವರೆಸಲು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ ಕೇಳಿಕೊಂಡಾಗ, ತಂದೆ ತಾಯಿಯನ್ನು ಪ್ರತ್ಯೇಕವಾಗಿ ಇರಿಸಿ ನನ್ನೊಂದಿಗೆ ಪ್ರತ್ಯೇಕ ಮನೆಯನ್ನು

ಮಾಡಿ ಜೀವನ ಮಾಡಿದಲ್ಲಿ ಮಾತ್ರ ಬರುತ್ತೇನೆ ಎಂದು ಹೇಳಿದ್ದೆ ಎಂದರೆ ಸರಿ. ತಂದೆ ತಾಯಿಯರನ್ನು ನೋಡಿಕೊಳ್ಳುವ ಜವಾಬ್ದಾರಿ ಗಂಡು ಮಕ್ಕಳಿಗೆ ಇರುತ್ತದೆ ಎಂದರೆ ಸರಿ. 2 ನೇ ಅರ್ಜಿದಾರರಿಗೆ ಪ್ರಸ್ತುತ 2 ವರ್ಷ 3 ತಿಂಗಳ ವಯಸ್ಸು. 2 ನೇ ಅರ್ಜಿದಾರಳಿಗೆ ಜನನ ಆದ ನಂತರ 5 ತಿಂಗಳಾದರೂ ಎದುರುಗಾರನು ಬಂದು ನೋಡಿರುವುದಿಲ್ಲ ಮತ್ತು 5 ತಿಂಗಳ ನಂತರ ಎದುರುಗಾರನು 2 ನೇ ಅರ್ಜಿದಾರಳನ್ನು ತನ್ನೊಂದಿಗೆ ಕರೆದುಕೊಂಡು ಹೋಗಿದ್ದನು ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ.

9. ಸಾಕ್ಷಿಗೆ ಎದುರುಗಾರರ ವಕೀಲರು ತಮ್ಮ ಕಡತದಿಂದ 3- ಛಾಯಾ ಚಿತ್ರಗಳನ್ನು ತೋರಿಸಿ ಅವುಗಳಲ್ಲಿ ಕಂಡು ಬರುವಂತೆ ಎದುರುಗಾರನು ನನ್ನೊಂದಿಗೆ ಮತ್ತು ಮಗುವಿನೊಂದಿಗೆ ನೋಡಲು ಬಂದಾಗ ಛಾಯಾ ಚಿತ್ರಗಳನ್ನು ತೆಗೆದುಕೊಂಡಿರುತ್ತಾನೆ ಎಂದರೆ ಸಾಕ್ಷಿಯು ಸದರಿ ಛಾಯಾ ಚಿತ್ರಗಳನ್ನು ಎದುರುಗಾರನು ಹೆದರಿಸಿ ಮತ್ತು ಬೆದರಿಸಿ ಜಾತ್ರೆಯ ಸಮಯದಲ್ಲಿ ತೆಗೆದುಕೊಂಡಿದ್ದನು ಎಂದು ನುಡಿಯುತ್ತಾರೆ. ಎದುರುಗಾರನು

-13 -

ನನ್ನ ಮತ್ತು ಮಗುವಿನ ಜೊತೆಯಲ್ಲಿನ ಫೋಟೋವನ್ನು ಜಾತ್ರೆಯ ಸಮಯದಲ್ಲಿ ಹೆದರಿಸಿ ಮತ್ತು ಬೆದರಿಸಿ ತೆಗೆದುಕೊಂಡಿದ್ದನು ಎಂದು ಮುಖ್ಯ ಅರ್ಜಿಯಲ್ಲಿ ಬರೆಸಿರುವುದಿಲ್ಲ. ಸದರಿ ಸಂಗತಿಯನ್ನು ಮುಖ್ಯ ಅರ್ಜಿಯಲ್ಲಿ ಬರೆಸಲು ನನಗೆ ತೊಂದರೆ ಇರಲಿಲ್ಲ. ಸದರಿ ಛಾಯಾ ಚಿತ್ರಗಳನ್ನು ನೋಡಿದಲ್ಲಿ ಯಾವುದೇ ರೀತಿಯ ಹೆದರಿಕೆ ಮತ್ತು ಬೆದರಿಕೆಯನ್ನು ನನಗೆ ನೀಡಿಲ್ಲದಿರುವ ಬಗ್ಗೆ ಮತ್ತು ನಾನು ಸಾಮಾನ್ಯವಾಗಿ ಹಸನ್ಮುಖಿಯಾಗಿಯೇ ಛಾಯಾ ಚಿತ್ರವನ್ನು ಸಂತೋಷದಿಂದ ತೆಗೆಸಿಕೊಂಡಂತೆ ಕಂಡು ಬರುತ್ತದೆ ಎಂದರೆ ಸರಿಯಲ್ಲ. ಸದರಿ 3 ಛಾಯಾ ಚಿತ್ರಗಳನ್ನು ನಿ.ಆರ್-1 ರಿಂದ 3 ಎಂದು ಗುರುತಿಸಲಾಯಿತು.

10. ನಾನು ಗರ್ಭಿಣಿ ಆಗಿದ್ದಾಗ ಮತ್ತು ನಂತರದಲ್ಲಿ 2 ನೇ ಅರ್ಜದಾರಳಿಗೆ ಜನನ ನೀಡಿದ ನಂತರ ತಗುಲಿದ ಎಲ್ಲಾ ವೈದ್ಯಕೀಯ ಖರ್ಚುಗಳನ್ನು ಎದುರುಗಾರನೇ ಭರಿಸಿದ್ದನು ಎಂದರೆ ಸಾಕ್ಷಿಯು ತನ್ನ ತಂದೆ ತಾಯಿ ಭರಿಸಿದ್ದರು ಎಂದು ನುಡಿಯುತ್ತಾರೆ. ನನ್ನೊಂದಿಗೆ ಉತ್ತಮವಾದ ಸಾಂಸಾರಿಕ ಜೀವನ ನಡೆಸಲು ನಾನು ಹೇಳಿದಂತೆಯೇ ಎದುರುಗಾರನು ಪ್ರತ್ಯೇಕವಾದ ಬಾಡಿಗೆ ಮನೆಯನ್ನು ಸಹ ಮಾಡಿದ್ದನು ಎಂದರೆ  ಸರಿಯಲ್ಲ. ಅದಕ್ಕೆ ಸಂಬಂಧಿಸಿದಂತೆ ಎದುರುಗಾರನು ಬಾಡಿಗೆ ಮನೆಯ ಮಾಲೀಕರೊಂದಿಗೆ ಕರಾರನ್ನು ಸಹ ಮಾಡಿಕೊಂಡಿದ್ದನು ಎಂದರೆ ಗೊತ್ತಿಲ್ಲ. ತನ್ನ ತಂದೆ ತಾಯಿಯ ಜೀವನ ಏನಾದರೂ ಪರವಾಗಿಲ್ಲ, ತನ್ನೊಂದಿಗೆ ಉತ್ತಮ ಸಾಂಸಾರಿಕ ಜೀವ ನಡೆಸುವ ಉದ್ದೇಶದಿಂದ ನನ್ನ ಮಾತಿನಂತೆ ಎದುರುಗಾರನು ಬಾಡಿಗೆ ಮನೆಯನ್ನು ಸಹ ಮಾಡಿದ್ದರೂ ನಾನು ಆತನೊಂದಿಗೆ ಜೀವನ ಮಾಡಲು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಬಾಡಿಗೆ ಮನೆಯನ್ನು ಮಾಡಿದ ನಂತರವೂ ಎದುರುಗಾರರನ ಕಡೆಯಿಂದ ಹಿರಿಯವರು ಬಂದ ಕೇಳಿದರೂ, ನಾನು ಎದುರುಗಾರನಿಗೆ ಸಾಂಸಾರಿಕ ಜೀವನ ಮುಂದುವರೆಸಲು ಬಂದಿರುವುದಿಲ್ಲ ಎಂದರೆ ಸರಿಯಲ್ಲ.

11. ನಾನು ಎದುರುಗಾರನೊಂದಿಗೆ ಸಾಂಸಾರಿಕ ಜೀವನ ಮುಂದುವರೆಸಲು ನಿರಾಕರಿಸಿದ ಕಾರಣಕ್ಕೆ ಎದುರುಗಾರನು ತನ್ನೊಂದಿಗೆ ಸಾಂಸಾರಿಕ ಜೀವನ

- 14 -

ಮುಂದುವರೆಸುವ ಇಷ್ಟ ಮತ್ತು ಮನಸ್ಸನ್ನು ಹೊಂದಿರುವ ಕಾರಣಕ್ಕೆ ಹುಬ್ಬಳ್ಳಿಯ ಮಾನ್ಯ ಕೌಟುಂಬಿಕ ನ್ಯಾಯಾಲಯದಲ್ಲಿ ದಾಂಪತ್ಯ ಪುನರ್ ಸ್ಥಾಪನೆಗಾಗಿ ಎಂ.ಸಿ ಸಂಃ 607/2024 ಸಲ್ಲಿಸಿದ್ದನು ಎಂದರೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ನನಗೆ ಹಾಜರಾಗುವಂತೆ ನೋಟೀಸು ಬಂದಿದೆ ಎಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿ ನನಗೆ

ನೋಟೀಸು ಖುದ್ದಾಗಿ ಜಾರಿ ಆಗಿರುತ್ತದೆ ಎಂದರೆ ಸರಿಯಲ್ಲ. 2 ನೇ ಅರ್ಜಿದಾರರನ್ನು ಎದುರುಗಾರನು ನೋಡಲು ಸಾಕಷ್ಟು ಹಂಬಲ ವ್ಯಕ್ತಪಡಿಸಿದ್ದರೂ, ನಾನು ಆಕೆಯನ್ನು ನೋಡಲು ಎದುರುಗಾರನಿಗೆ ಬಿಡುತ್ತಿಲ್ಲ ಎಂದರೆ ಸಾಕ್ಷಿಯು ನೋಡಲು ಬಂದಿರುವುದೇ ಇಲ್ಲ ಎಂದು ನುಡಿಯುತ್ತಾರೆ. ಉದ್ದೇಶಪೂರ್ವಕವಾಗಿ ನಾನು ಮತ್ತು ನನ್ನ ಪೋಷಕರು 2 ನೇ ಅರ್ಜಿದಾರಳನ್ನು ನೋಡಲು ಎದುರುಗಾರನಿಗೆ ಬಿಡುತ್ತಿಲ್ಲ ಎಂದರೆ ಸರಿಯಲ್ಲ. ಇಂದಿಗೂ ಸಹ ನನ್ನೊಂದಿಗೆ ಸಾಂಸಾರಿಕ ಜೀವನ ನಡೆಸಲು ಎದುರುಗಾರನು ತಯಾರಿದ್ದು, ನನ್ನನ್ನು ಕರೆದುಕೊಂಡು ಹೋಗಲು ತಯಾರು ಇರುತ್ತಾನೆ ಎಂದರೆ ಸಾಕ್ಷಿಯು ನನ್ನನ್ನು ಮತ್ತು ಮಗಳನ್ನು ಬಾಡಿಗೆ ಮನೆಯಲ್ಲಿ ಮತ್ತು ಆತನ ಪೋಷಕರನ್ನು ಪ್ರತ್ಯೇಕವಾದ ಮನೆಯಲ್ಲಿ ನೋಡಿಕೊಂಡರೆ ನನ್ನ ತಕರಾರು ಇಲ್ಲ ಎಂದು ನುಡಿಯುತ್ತಾರೆ.

12. ಎದುರುಗಾರನು 2 ನೇ ಅರ್ಜಿದಾರಳನ್ನು ನೋಡಲು ಮತ್ತು ಕರೆದುಕೊಂಡು ಹೋಗಲು ನನ್ನ ತಕರಾರು ಇರುವುದಿಲ್ಲ. ಈ ಪ್ರಕರಣವನ್ನು ಸಲ್ಲಿಸಲು ಯಾವುದೇ ಕಾರಣಗಳು ಉಂಟಾಗಿರುವುದಿಲ್ಲ ಎಂದರೆ ಸರಿಯಲ್ಲ. ಮುಖ್ಯ ಅರ್ಜಿಯಲ್ಲಿ ನಮೂದಿಸಿರುವ ಸಂಗತಿಗಳೆಲ್ಲವೂ ಸುಳ್ಳಿನಿಂದ ಕೂಡಿರುವುದರಿಂದ ನಾನು ಯಾವುದೇ ಪರಿಹಾರ ಪಡೆಯಲು ಅರ್ಹಳಲ್ಲ ಎಂದರೆ ಸರಿಯಲ್ಲ. ನಾನೇ ಸ್ವತಃ ಎದುರುಗಾರನನ್ನು ತ್ಯಜಿಸಿ ತವರು ಮನೆಯಲ್ಲಿ ವಾಸವಿದ್ದೇನೆ ಎಂದರೆ ಸಾಕ್ಷಿಯು ಆತನು ತೊಂದರೆ ನೀಡಿದ ಕಾರಣಕ್ಕೆ ಬಿಟ್ಟು ಬಂದಿರುತ್ತೇನೆ ಎಂದು ನುಡಿಯುತ್ತಾರೆ. ಮದುವೆ ಆದ ನಂತರ ನಾನೇ ಎದುರುಗಾರನಿಗೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

- 15 -

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

Sd/-
ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ